**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 28/2024**

**ಚಾ.ಸಾಃ 4, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ಮನೋಜ ಹರಿಕಂತ್ರ |
| ತಂದೆಯ ಹೆಸರು | ಮಂಗಳ ಹರಿಕಂತ್ರ |
| ವಯಸ್ಸು | 22 ವರ್ಷಗಳು |
| ಉದ್ಯೋಗ | ಮೀನುಗಾರಿಕೆ |
| ವಾಸ್ತವ್ಯ | ಮಂಕಿ, ಹೊಸಹಿತ್ತಲ್, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 13-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 20-02-2024 ರಂದು ಆರೋಪಿತರು ಚಾಸಾ-1 ರವರ ಮೇಲೆ ಕಾಯಿಸಿದ ಬಿಸಿ ಎಣ್ಣೆಯನ್ನು ಮೈಮೇಲೆ ಚಲ್ಲಿದ ವಿಚಾರವಾಗಿ ಪೋಲೀಸರು ನನ್ನನ್ನು ಮತ್ತು ಚಾಸಾ-2 ರವರನ್ನು ಪೋಲೀಸ್ ಠಾಣೆಗೆ ಕರೆಸಿದ್ದು 1 ನೇ ಆರೋಪಿಯು ಪೋಲೀಸ್ ಠಾಣೆಗೆ ಒಂದು ಬಾಂಡ್ಲಿಯನ್ನು ಹಾಜರುಪಡಿಸಿದ್ದು ಪೋಲೀಸರು ಅದನ್ನು ನಮಗೆ ತೋರಿಸಿ ಫೋಟೋ ತೆಗೆಸಿ ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ 2 ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಬಾಂಡ್ಲಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಬಾಂಡ್ಲಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯರಿಂದಃ**

ಚಾಸಾ-6 ನನ್ನ ಸ್ನೇಹಿತ. ಈ ದಿನ ನಾನು ಆತನನ್ನು ಕರೆದುಕೊಂಡು ಬಂದು ಆಸ್ಪತ್ರೆ ಹತ್ತಿರ ಬಿಟ್ಟು ಬಂದಿದ್ದೇನೆ. ಪೋಲೀಸರು 22 ನೇ ತಾರೀಕು ನಮ್ಮ ಮನೆಯ ಹತ್ತಿರ ಬಂದು ಠಾಣೆಗೆ ಬರುವಂತೆ ಕರೆದಿರುತ್ತಾರೆ. ಕರೆಯಲು ಬಂದ ಪೋಲೀಸರ ಹೆಸರು ಗೊತ್ತಿಲ್ಲ. ಅವರು ನನಗೆ ಪರಿಚಯ ಇಲ್ಲ. ಆ ದಿನ 12-00 ಗಂಟೆಗೆ ಬಂದು 03-00 ಗಂಟೆ ವೇಳೆಗೆ ಬರುವಂತೆ ಹೇಳಿರುತ್ತಾರೆ. ಯಾವ ಕಾರಣಕ್ಕೆ ಬರಬೇಕು ಎಂದು ನನಗೆ ಹೇಳಿರಲಿಲ್ಲ. ನಾನು ಹೋದಾಗ ಪೋಲೀಸ್ ಠಾಣೆಯಲ್ಲಿ ಯಾರೂ ಇರಲಿಲ್ಲ. ನಾನು ಹೋದ ನಂತರ ಎಲ್ಲರೂ ಬಂದಿರುತ್ತಾರೆ. ನನ್ನನ್ನು ಠಾಣೆಯ ಒಳಗೆ ಕರೆದಾಗ ಮಧ್ಯಾಹ್ನ 03-00 ಗಂಟೆ ಆಗಿತ್ತು. ನನ್ನ ಮುಂದೆ ಪೋಲೀಸರು ಆರೋಪಿತರ ಹೇಳಿಕೆ ಪಡೆದುಕೊಂಡಿಲ್ಲ.

ಪಂಚನಾಮೆಗೆ ಚಾಸಾ-5 ರವರು ಮಾಹಿತಿ ಕೊಟ್ಟಿರುತ್ತಾರೆ. ನಿಪಿ-3 ಮತ್ತು 4 ರ ಫೋಟೋ ತೆಗೆಯುವ ಕಾಲಕ್ಕೆ ಚಾಸಾ-5 ಇರಲಿಲ್ಲ. ಪೋಲೀಸರು ಮನೆಯ ಹತ್ತಿರ ಬಂದಾಗ ಅಲ್ಲಿಯೂ ಒಂದು ದಾಖಲೆಗೆ ಸಹಿ ತೆಗೆದುಕೊಂಡಿರುತ್ತಾರೆ. ಅದು ಏನು ದಾಖಲೆ ಎಂದು ಗೊತ್ತಿಲ್ಲ. ನಾನು, ಚಾಸಾ-5 ಒಂದೇ ಕಡೆ ಮೀನು ಹಿಡಿಯಲು ಹೋಗುತ್ತೇವೆ ಎಂದರೆ ಸರಿಯಲ್ಲ. ಆತ ಕೇಳಿರುವಂತೆ ಚಾಸಾ-1 ರವರಿಗೆ ಸಹಾಯ ಆಗುವಂತೆ ಪಂಚನಾಮೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ 1 ನೇ ಆರೋಪಿ ಮುಮಾ-1 ಬಾಂಡ್ಲಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಪೋಲೀಸರು ಹೇಳಿ ಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**